MYSORE LEGISLATIVE ASSEMBLY

EIGHTEENTH DAY.

Friday, 23rd March 1956.

The House met in the Assembly Hall, Atara Kacheri, Bangalore, at Twelve of the Clock.

MR. DEPUTY SPEAKER (SRI R. CHENNIGARAMIAH) in the Chair.

QUESTIONS AND ANSWERS.

Cottage Industries.

Q.—107. Sri D. DEVARAJ URS (Hunsur).—

Will the Government be pleased to state:—

(*a*) the various cottage industries established in the State by the Cottage Industries Department of the Central Government;

(*b*) the total amount of financial aid given to the several cottage industries in the State?

A.—Sri H. M. CHANNABASAPPA (Minister for Industries).—

(*a*) and (*b*) The Government of India have not established any Cottage Industries in the State; but they have sanctioned financial assistance to the schemes detailed in the statement appended below.

Serial No.	Name of the Scheme	Total estimated expenditure	Financial Aid from the Government of India	
			Grant	Loan
		Rs.	Rs.	Rs.
1	Expansion of Rattan Industry at Shimoga.	36,300	7,500	...
2	Manufacture of Utilitarian glass articles.	7,930	7,500	...
3	Expansion of the Hand-made Paper Centre, Central Industrial Workshop, Bangalore.	40,240	14,000	...
4	Expansion of the Mat-Weaving Centre, Central Industrial Workshop, Bangalore.	26,580	11,000	...
5	Pottery (Red-Clay Production Unit), Krishnarajapuram.	22,200	4,500	...
6	Expansion of the Leather Industry ...	64,498	47,300	...
7	Model Smithy Centres ...	1,68,000	70,500	48,000
8	Model Carpentry Centres ...	3,00,000	1,42,720	54,560
9	Village Oil Ghani ...	16,000	8,550	2,000

ಶ್ರೀ ಡಿ. ದೇವರಾಜ ಅರಸ್.—ಭಾರತ ಸರ್ಕಾರ ದಿಂದ ಸಹಾಯ ದ್ರವ್ಯ ಕೊಡುತ್ತಿದ್ದಾರೆಂದು ಒಂಭತ್ತು ಗೃಹ ಕೈಗಾರಿಕೆಗಳನ್ನು ಪಟ್ಟಿಯಲ್ಲಿ ಕೊಟ್ಟಿದ್ದೀರಿ. ಒಂಭತ್ತು ಕೈಗಾರಿಕೆಗಳು ಮಾತ್ರವೇ ಅಥವ ಇನ್ನೂ ಹೆಚ್ಚಾಗಿವೆಯೇ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಇನ್ನೊಂದು ಇದೆ. ಅದು Palmgur Industry.

ಶ್ರೀ ಡಿ. ದೇವರಾಜ ಅರಸ್.—Hand-pound rice ಇದರಲ್ಲಿ ಸೇರುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನೂ ನಮ್ಮ ಸರ್ಕಾರದವರು ಒಂದು centre ಆಗಿ ನಡೆಸುತ್ತಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಅದಕ್ಕೆ ಸಹಾಯ ದ್ರವ್ಯವನ್ನು ಯಾರು ಒದಗಿಸುತ್ತಿದ್ದಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಂತ್ರ ಕೈಗಾರಿಕೆಗಳ basis ಮೇಲೆ hand-pound industry ಯನ್ನು ನಡೆಸುವುದಕ್ಕೆ ಅಪೇಕ್ಷೆ ಪಟ್ಟವರಿಗೆ ಭಾರತ ಸರ್ಕಾರದವರು ಸಹಾಯ ಮಾಡುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಕೇಂದ್ರ ಸರ್ಕಾರದವರು ಸ್ಥಾಪನೆ ಮಾಡಿಲ್ಲ ಎಂದು ಉತ್ತರ ಕೊಡರಾಗಿದೆ. ಹಾಗಾದರೆ ಸಂಸ್ಥಾನದಲ್ಲಿ ಅವರು ಸ್ಥಾಪನೆ ಮಾಡಿರುವ ಗೃಹಕೈಗಾರಿಕೆಗಳಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೈಗಾರಿಕೆಗಳಿಲ್ಲ. ಟ್ರೈನಿಂಗ್ ಸೆಂಟರುಗಳನ್ನು ಸ್ಥಾಪಿಸಿಕೊಂಡು ಬಂದಿದ್ದಾರೆ. ನಾವು ಕಳುಹಿಸಿದತಕ್ಕ ಯೋಜನೆಗಳಿಗನುಗುಣವಾಗಿ ಅವರು ಸಹಾಯ ಮಾಡುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ಈ ಕೈಗಾರಿಕೆಗಳ ಮೇಲೆ ಯಾವ ಸರ್ಕಾರದ ಹತೋಟಿ ಇದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವು ನೇರವಾಗಿ ಮೈಸೂರು ಸರ್ಕಾರದ ಹತೋಟಿಯಲ್ಲಿವೆ.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಈ ಕೈಗಾರಿಕೆಗಳೆಲ್ಲ ಸಮರ್ಪಕವಾಗಿ ಕೆಲಸ ಮಾಡುತ್ತಿವೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವು ಚೆನ್ನಾಗಿ ಕೆಲಸ ಮಾಡುತ್ತಿವೆ ; ಇನ್ನೂ ಕೆಲವನ್ನು ಉತ್ತಮಪಡಿಸುವ ಅವಶ್ಯಕತೆ ಇದೆ.

Sri A. V. NARASIMHA REDDY.—In what year these grants have been sanctioned to these centres, Sir ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊದಲನೆಯದು 1954-55ರಲ್ಲಿ, ಎರಡನೆಯದು 1955-56ರಲ್ಲಿ, ಮೂರನೆಯದು 1953-54ರಲ್ಲಿ, ನಾಲ್ಕನೆಯದು 1953-54ರಲ್ಲಿ, ಐದನೆಯದು 1953-54ರಲ್ಲಿ, ಆರನೆಯದು 1954-55ರಲ್ಲಿ ಮಂಜೂರಾದವು. The rest are fresh ones.

Sri A. V. NARASIMHA REDDY.—Is it not a fact that Kisan Products located in Krishnarajapuram taluk have also applied for loan or grant ?

Sri H. M. CHANNABASAPPA.—Kisan Products do not come under the centres managed by the Government.

Sri A. V. NARASIMHA REDDY.—May I know whether these grants are from the Government of India or the Government of Mysore ?

Sri H. M. CHANNABASAPPA.—The Government of India has given assistance to the Government of Mysore.

Sri A. V. NARASIMHA REDDY.—Is it to manage these industries ?

Sri H. M. CHANNABASAPPA.—We have opened some training centres and the Government of India has adopted the policy of assisting the State Governments to sponsor schemes calculated to improve the rural and cottage industries.

Sri A. V. NARASIMHA REDDY.—Is not this aid extended even to centres which have been managed by local people ?

Sri H. M. CHANNABASAPPA.—If the industries that they manage come under the co-operative fold, they will also get it.

Sri A. V. NARASIMHA REDDY.—Is it not a fact that the Krishnarajapur Kisan Products have been offered a loan or grant of one lakh of rupees from the Government of India ?

Sri H. M. CHANNABASAPPA.—I am not aware of it.

Sri A. V. NARASIMHA REDDY.—Has not the man in charge of that Kisan Products through representation made to this Government kept them informed about that proposal ?

Sri H. M. CHANNABASAPPA.—'Kisan Products' does not come under the Government at all, and so how does this question arise ?

ಶ್ರೀ ಜಿ. ನಾರಾಯಣಗೌಡ.—ಮುರಗೆಲನದ ಮಾದರಿ ಕೇಂದ್ರಗಳು ಎಂದು ಹೇಳಿದ್ದೀರಿ. ಈ ಕೇಂದ್ರಗಳನ್ನು ಎಲ್ಲೆಲ್ಲಿ ಸ್ಥಾಪನೆ ಮಾಡುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ನಾಲ್ಕು ಸ್ಥಳಗಳಲ್ಲಿ ಅಂದರೆ ಬಳ್ಳಾರಿ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಚಿತ್ರದುರ್ಗಗಳಲ್ಲಿ ಮಾಡಬೇಕೆಂದು ಯೋಚನೆ ಮಾಡಿದ್ದೇವೆ.

ಶ್ರೀ ಜಿ. ನಾರಾಯಣಗೌಡ.—ಈ ಕೇಂದ್ರಗಳನ್ನು ಸಂಸ್ಥಾನದ ಎಲ್ಲ ಜಿಲ್ಲೆಗಳಲ್ಲಿಯೂ ಸ್ಥಾಪನೆ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಟ್ರೈನಿಂಗ್ ಕೇಂದ್ರಗಳು ಮತ್ತು ಕೈಗಾರಿಕಾ ಪಾಠಶಾಲೆಗಳು ಇವೆಲ್ಲವನ್ನೂ ಕೂಡ ಕ್ರೋಢೀಕರಿಸಿ ಎಲ್ಲ ಜಿಲ್ಲೆಗಳಲ್ಲಿಯೂ ಸಾಧ್ಯವಾದಷ್ಟು ಹೊಸ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರ ಯೋಚಿಸುತ್ತಿದೆ.

ಶ್ರೀ ಜಿ. ನಾರಾಯಣಗೌಡ.—ಮುರಗೆಲನದ ಮಾದರಿ ಕೇಂದ್ರಗಳನ್ನು ನಾಲ್ಕು ಸ್ಥಳಗಳಲ್ಲಿ ಸ್ಥಾಪನೆ ಮಾಡುವುದಕ್ಕಿಂತ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿಯೂ ಒಂದೊಂದನ್ನು ಸ್ಥಾಪನೆ ಮಾಡುವುದು ಒಳ್ಳೆಯದಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಳ್ಳೆಯದು.

ಶ್ರೀ ಜಿ. ನಾರಾಯಣಗೌಡ.—ಹಾಗೆ ಮಾಡುತ್ತೀರಾ ?

*Asterisk indicates that the remarks or speeches have not been revised by the Member concerned.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಣ ಒದಗಿ ದಂತೆಲ್ಲ ಬಡಾವಣೆ ಮಾಡಿಕೊಂಡು ಹೋಗು ತ್ತೇವೆ.

Sri M. PALANIYAPPAN.—Sir, I am referring to the expansion of leather industry; may I know which are the places where it has been extended?

Sri H. M. CHANNABASAPPA.—Pavagada, Hulikunte, and Doddasiddavvanahalli.

Sri M. PALANIYAPPAN.—Has it come to the notice of the Government that Jeevanahalli in the Bangalore North Taluk is a place where this is a major industry?

Sri H. M. CHANNABASAPPA.—May be.

Sri M. PALANIYAPPAN.—What aid have Government given under this Cottage Industries Scheme?

Sri H. M. CHANNABASAPPA.—If they come under the co-operative fold, Government will certainly help them in accordance with the rules and procedure prescribed.

Sri M. PALANIYAPPAN.—Is it the policy of the Government that individual concerns will not be given any aid or is there any bar to Government to establish leather industry training centre there?

Sri H. M. CHANNABASAPPA.—As I said, Government of India help would be available to them if they come within the pattern that they have devised.

Sri M. PALANIYAPPAN.—Is it the policy of Government to wait till such time that these people come under their fold or whether Government have got any agency to assist the people to form such co-operative units?

Sri H. M. CHANNABASAPPA.—Co-operative units must be started by the people themselves. We can assist them to come into co-operativefold.

Sri M. PALANIYAPPAN.—Is it not necessary on the part of the Government to start training centres in view of the fact that there are so many industries?

Sri H. M. CHANNABASAPPA.—The people must be prepared to come within the co-operative fold.

ಶ್ರೀ ವಿ. ಆರ್. ನಾಯ್ಡು.—ಮೈಸೂರು ಗ್ಲಾಸ್ ಅಂಡ್ ಎನಾಮಲ್ ವರ್ಕ್ಸ್ ಕಂಪೆನಿಯಲ್ಲಿ ಮೈಸೂರು ಸರ್ಕಾರದ ಷೇರಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಜಾಯಿಂಟ್ ಸ್ಟಾಕ್ ಕಂಪೆನಿ ವಿಚಾರವಿಲ್ಲ; ಟ್ರೈನಿಂಗ್ ಸೆಂಟರ್ ವಿಚಾರ ಮಾತನಾಡುತ್ತಿದ್ದೇವೆ.

ಶ್ರೀ ವಿ. ಆರ್. ನಾಯ್ಡು.—ಈಗ ಗೃಹ ಕೈಗಾರಿಕೆ ಗಳನ್ನು ಶ್ರೀರಾಂಪುರ ಮತ್ತು ಮಲ್ಲೇಶ್ವರಗಳಲ್ಲಿ ಸ್ಥಾಪಿಸುವುದಕ್ಕೆ ಅಡ್ಡಿಯೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಏನೂ ಇಲ್ಲ.

ಶ್ರೀ ವಿ. ಆರ್. ನಾಯ್ಡು.—ಅಲ್ಲಿ ಬಡವರು, ಕಾರ್ಮಿಕರು ಹೆಚ್ಚಾಗಿರುವುದರಿಂದ ಹಳ್ಳಿಗಳಿಗೆ ಕೊಡುವ ಪ್ರಾಮುಖ್ಯತೆಯನ್ನು ಅಲ್ಲಿಗೂ ಕೊಡಬೇಕಾದದ್ದು ಕರ್ತವ್ಯ. ಆದ್ದರಿಂದ ಯಾವುದಾದರೂ ಒಂದು ಉತ್ತಮವಾದ ಗೃಹ ಕೈಗಾರಿಕೆಯನ್ನು ಅಲ್ಲಿರುವ ಜನರ ಜೀವನಕ್ಕೆ ಸಹಾಯವಾಗುವ ರೀತಿಯಲ್ಲಿ ಸ್ಥಾಪಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗೃಹ ಕೈಗಾರಿಕೆಗಳಿಗೆ ಉತ್ತೇಜನ ಕೊಡುವುದಕ್ಕೆ ಸರ್ಕಾರದವರು ನಾನಾ ಏರ್ಪಾಡು ಮಾಡಿದ್ದಾರೆ. ಆ ಏರ್ಪಾಡುಗಳನ್ನು ಸಾರ್ವಜನಿಕರು ಉಪಯೋಗಿಸಿಕೊಳ್ಳಬೇಕು.

ಶ್ರೀ ಡಿ. ಆರ್. ಕರಿಗೌಡ.—1955-56 ನೆಯ ಸಾಲಿಗೆ ಇಂಡಿಯಾ ಸರ್ಕಾರ ಹಣ ಕೊಟ್ಟಿರುವುದು ಸಾಲವೋ ಆಥವಾ ಗ್ರಾಂಟೋ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನಾಗಲೇ ಹೇಳಿದ್ದೇನೆ.

ಶ್ರೀ ಡಿ. ಆರ್. ಕರಿಗೌಡ.—ಹಾಸನ ಡಿಸ್ಟ್ರಿಕ್ಟಿನಲ್ಲಿ ಯಾವುದಾದರೂ ಕೈಗಾರಿಕೆ ಸ್ಥಾಪನೆ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಭಾರತ ಸರ್ಕಾರದಿಂದ ಟ್ರೈನಿಂಗ್ ಸೆಂಟರಿಗಾಗಿ ಬಂದಿರುವ ಸಹಾಯ. ಆ ವಿವರ ಮಾತ್ರ ಇಲ್ಲಿ ಕೊಡಲಾಗಿದೆ.

ಶ್ರೀ ಡಿ. ಆರ್. ಕರಿಗೌಡ.—ಹಾಸನ ಡಿಸ್ಟ್ರಿಕ್ಟಿನಲ್ಲಿ ಮರ ಬಹಳವಾಗಿರುವುದರಿಂದ ಅಲ್ಲಿ ಯಾವುದಾದರೂ ಕೈಗಾರಿಕೆಯನ್ನು ಪ್ರಾರಂಭಿಸುವಿರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಯಾವುದನ್ನು ಸ್ಥಾಪಿಸಬೇಕೆಂಬುದನ್ನು ಪರ್ಯಾಲೋಚಿಸುತ್ತೇವೆ.

Rural Industrial Bank (Loan granted to Industries).

Q.—454. Sri A. MUNIYAPPA (Sidlaghatta—Chikballapur—Scheduled Castes).—

Will the Government be pleased to state :—

(*a*) the amount of loan granted by the Rural Industrial Bank to each industry in the State during 1953-54 and 1954-55 (districtwise and talukwise figures to be furnished);

(*b*) the amount spent on the establishment in this behalf during 1953-54 and 1954-55;

(*c*) the number of times the concerned darkhast records were sent back during the above said years for getting details (districtwise and talukwise figures to be given)?